SRI S. R. BOMMAI.—I rise to a point of order. ನಾವು ಈಗ ತೆಗೆದು ಕೊಂಡಂಥ ನಿರ್ಣಯದ ಹಿಂದೆ ಹೋದರೆ ಅನೇಕ ವಿಚಾರಗಳು ಮತ್ತೆ ಬರುತ್ತವೆ, ಅದನ್ನು ಪ್ರಸ್ತಾಪ ಮಾಡುವುದರಿಂದ ಏನೂ ಲಾಭವಿಲ್ಲ. ಈಗ ನಿರ್ಣಯ ಮಾಡಿದ್ದೇವೆ, ಆ ನಿರ್ಣಯದ ಪ್ರಕಾರ ಮುನವಿ ಮಾಡಿಕ್ಕೊಳ್ಳೋಣ. ಅದರ ಹಿಂದೆ ಹೋದರೆ ಅನೇಕ ವಿಚಾರಗಳನ್ನು ಹೇಳಬೇಕಾಗುತ್ತದೆ.

MR. DEPUTY SPEAKER.—I agree with you. Now, let us stop discussion on this matter. We shall go to the next item on the agenda.

CALLING ATTENTION TO A MATTER OF URGENT PUBLIC IMPORTANCE

Re: Closure of Ideal Jawa Factory at Mysore

ಶ್ರೀ ಹೆಚ್. ಗಂಗಾಧರನ್.—ಸನ್ಮಾನ್ಯ ಅಧ್ಯಕ್ಷರೆ, ಮೈಸೂರು ನಗರದಲ್ಲಿರತಕ್ಕ ಐಡಿಯಲ್ ಜಾವಾ ಕಾರ್ಖಾನೆಯನ್ನು ಆಕ್ರಮವಾಗಿ ಮುಚ್ಚಿರುವುದರಿಂದ ಸುಮಾರು ೩ ಸಾವಿರ ನೌಕರರಿಗೆ ಆಗಿರುವ ತೊಂದರೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ. ಬಿ. ಜಕನೂರ್.—(ಕಾರ್ಮಿಕ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಈ ಒಂದು ಹೇಳಿಕೆಯನ್ನು ಮಾಡುತ್ತೇನೆ.

ಮೈಸೂರಿನ ಐಡಿಯಲ್ ಜಾವಾ ಕಾರ್ಖಾನೆಯ ಆಡಳಿತ ವರ್ಗವು ಶ್ರೀಯುತರಾದ ರಹಮಾನ್ ಮತ್ತು ವೆಂಕಟರಾಮಯ್ಯ ಕ್ರಮವಾಗಿ, ಅಧ್ಯಕ್ಷ ಮತ್ತು ಕಾರ್ಯದರ್ಶಿ, ಐಡಿಯಲ್ ಜಾವಾ ನೌಕರರ ಸಂಘ, ಮೈಸೂರು, ಇವರ ಮೇಲೆ ಆರೋಪಗಳನ್ನು ಹೊರಿಸಿ ಶಿಸ್ತಿನ ಕ್ರಮವನ್ನು ಕೈಗೊಂಡಿದೆ. ಇವರುಗಳು, ಆಡಳಿತ ಅಧಿಕಾರಿ ಮತ್ತು ಮೇಲ್ವಿಚಾರಕರ ಜೊತೆ, ಅನುಚಿತ ರೀತಿಯಲ್ಲಿ ವರ್ತಿಸಿದರೆಂದೂ ಮತ್ತು ಅವಾಚ್ಯ ಶಬ್ದಗಳನ್ನು ಉಪಯೋಗಿಸಿದರೆಂದು ಇವರ ಮೇಲೆ ಆರೋಪಗಳನ್ನು ಹೊರಿಸಲಾಗಿದೆ. ಇವರುಗಳ ಸ್ಪಷ್ಟೀಕರಣವನ್ನು ಕೇಳಲಾಗಿದೆ. ಆದಕಾರಣ ಸದರೀ ಕಾರ್ಖಾನೆಯ ನೌಕರರು ತಾರೀಖು ೪-೬-೮೨ ರಿಂದ ಸುಮಾರು ೨.೪೫ ಘಂಟೆಯಿಂದ ಕೆಲಸ ಮಾಡದೆ ಸಂಪನ್ನು ಕೈಗೊಂಡರು. ಮೇಲ್ಕಂಡ ಕ್ರಮದಿಂದಾಗಿ ನೌಕರರು ಶಾಂತಿ ಪಾಲನೆ ಮತ್ತು ಕಾರ್ಖಾನೆಯ ಆಸ್ತಿ ಪಾಸ್ತಿಗೆ ನಷ್ಟ ಉಂಟುಮಾಡಬಹುದೆಂಬ ಶಂಕೆಯಿಂದ ಮಾಲಿಕ ವರ್ಗದವರು ತಾರೀಖು ೪-೬-೮೨ ರಿಂದ ಬೀಗ ಮುದ್ರೆಯನ್ನು ಘೋಷಿಸಿರುತ್ತಾರೆ.

ತಾರೀಖು ೯-೬-೮೨ ರಂದು ಮೈಸೂರಿನ ಸಹಾಯಕ ಕಾರ್ಮಿಕ ಕಮೀಷನರ್‌ರವರು ಒಂದು ಸಭೆಯನ್ನು ಕರೆದು ಸದರೀ ವ್ಯಾಜ್ಯದ ಇತ್ಯರ್ಥಕ್ಕೆ ಪ್ರಯತ್ನ ಮಾಡಿದರು. ಆಡಳಿತ ವರ್ಗವು ಸಭೆಯಲ್ಲಿ ಹಾಜರಿರಲಿಲ್ಲವಾದ್ದರಿಂದ ಕಾರ್ಯಕಲಾಪಗಳನ್ನು ಮುಂದಕ್ಕೆ ಹಾಕಲಾಯಿತು. ಆಗ ಉಂಟಾದ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು, ಕಾರ್ಮಿಕ ಕಮೀಷನರ್‌ರವರು ತಾರೀಖು ೧೭-೬-೮೨ ರಂದು ಒಂದು ಜಂಟೀ ಸಭೆಯನ್ನು (ನೌಕರರು ಮತ್ತು ಆಡಳಿತ ವರ್ಗದವರು) ಕರೆದು, ಕೆಲವು ಸಲಹೆಗಳನ್ನು ಎರಡೂ ಪಕ್ಷಗಳ ಮುಂದೆ ರಾಜಿಗಾಗಿ ಮತ್ತು ನೌಕರರ ಮೇ ತಿಂಗಳ ವೇತನವನ್ನು ಪಾವತಿ ಮಾಡುವುದಕ್ಕಾಗಿ ಮಂಡಿಸಿದರು. ಎರಡೂ ವರ್ಗದವರು ತಮ್ಮ ನಿರ್ಣಯವನ್ನು ತಿಳಿಸಲು ಕಾಲಾವಕಾಶ ಕೇಳಿದರು. ಯಾವ ರೀತಿಯ ಒಪ್ಪಂದವೂ ಸಾಧ್ಯವಾಗಲಿಲ್ಲ.

ಮತ್ತೊಮ್ಮೆ ತಾರೀಖು ೨೬-೬-೮೨ರಂದು ಸಹಾಯಕ ಕಾರ್ಮಿಕ ಕಮೀಷನರ್, ಮೈಸೂರು, ಇವರು ಸಂಧಾನಕ್ಕೆ ಪ್ರಯತ್ನ ಪಟ್ಟರೂ ಕೂಡ ಯಾವ ತರಹದ ಒಪ್ಪಂದಕ್ಕೂ ಬದಲಾಗಲಿಲ್ಲ.

ಸದರೀ ಕಾರ್ಖಾನೆಯ ಕಾರ್ಮಿಕ ಸಂಘದ ಕಾರ್ಯದರ್ಶಿಯೊಂದಿಗೆ ಕಾರ್ಮಿಕ ಕಮೀಷನರ್‌ರವರು ಪುನ: ಪರಿಸ್ಥಿತಿಯನ್ನು ಚರ್ಚಿಸಿದರು ಮತ್ತು ಪರಿಸ್ಥಿತಿಯನ್ನು ಚರ್ಚಿಸುವವರಿದ್ದಾರೆ.

ಆಡಳಿತ ವರ್ಗದವರು ಈಗ ಬಾಕಿ ಇರುವ ಮೇ ತಿಂಗಳ (೧೯೮೨) ನೇ ವೇತನವನ್ನು ಪಾವತಿ ಮಾಡಲು ಒಪ್ಪಿರುವರೆಂದು ತಿಳಿದು ಬಂದಿದೆ. ಅದಷ್ಟು ಬೇಗ ಬೀಗ ಮುದ್ರೆಯನ್ನು ತೆಗೆಸಿ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನ ಮಾಡಲು ಕಾರ್ಮಿಕ ಕಮೀಷನರ್‌ರವರಿಗೆ ಸೂಚನೆಗಳನ್ನು ನೀಡಲಾಗಿದೆ.

3-00 ಪಿ. ಎಂ.

ಶ್ರೀ ಎಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ, ಈ ಕಾರ್ಖಾನೆಯ ಲಾಕೌಟ್ ಮಾಡುವುದಕ್ಕೆ ಕಾರಣವೇನು ಕೊಟ್ಟಿದ್ದೀರಿ ಅದು ಸರಿಯಾದ ಕಾರಣವಲ್ಲ ಆ ಕಾರ್ಖಾನೆ ಪ್ರಾರಂಭವಾದಲಾಗಾಯ್ತು ಆ ಕಾರ್ಖಾನೆಯ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಈಗ ಯಾವ ಕಾರಣವನ್ನು ಕೊಡದೇ ನೊಟೀಸ್ ಕೊಡದೇ ಲಾಕೌಟ್ ಮಾಡಿರತಕ್ಕುದ್ದು ಸರಿಯಲ್ಲ. ಏನೂ ಚಾರ್ಜ್‌ಸ್‌ಗಳು ಇಲ್ಲ. ಕಾರ್ಖಾನೆಯ ಆಸ್ತಿಪಾಸ್ತಿಗಳಿಗೆ ಹಾನಿಯಾಗುತ್ತದೆಂದು ಚಾರ್ಜ್ ಮಾಡಿ ಲಾಕೌಟ್ ಮಾಡಿರತಕ್ಕುದ್ದು ಇದರಿಂದ ಆ ಕಾರ್ಮಿಕರ ಸಂಘದವರಿಗೆ ಅವಮಾನ ಮಾಡಿದ ಹಾಗಿದೆ. ಸರ್ಕಾರದವರು ಇದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಸಂಗ್ರಹಿಸಿದ ಹಾಗೆ ಕಾಣುತ್ತಿಲ್ಲ. ಸರಿಯಾದ ವರದಿಯನ್ನು ನಮ್ಮ ಅಧಿಕಾರಿಗಳು ಸರ್ಕಾರಕ್ಕೆ ಕೊಟ್ಟ ಹಾಗೆ ಕಾಣುತ್ತಿಲ್ಲ. ಲಾಕೌಟ್ ಮಾಡಬೇಕಾಗಿದ್ದರೆ ಕಾನೂನು ಪ್ರಕಾರವಾಗಿ ಮಾಡಬೇಕು ಆ ರೀತಿಯಾಗಿ ಮಾಡಿಲ್ಲ. ಅಕ್ರಮವಾಗಿ ಲಾಕೌಟ್ ಮಾತಿರುವುದಕ್ಕೆ ಅವರ ವಿರುದ್ಧ ಏನು ಕ್ರಮ ತೆಗೆದುಕೊಂಡಿದ್ದೀರಿ ? ಅದನ್ನು ಕೂಡ ತಾವು ಇಲ್ಲಿ ತಿಳಿಸಿಲ್ಲ. ಅಂತೆ ೨-೩ ಸಾವಿರ ನೌಕರರು ಕೆಲ್ಸವಿಲ್ಲದೆ ಸಂಬಳವಿಲ್ಲದೆ ಬೀದಿಯಲ್ಲಿ ತಿರುಗುತ್ತಿರುವಾಗ, ಈ ಲಾಕೌಟ್‌ನ ಬಗ್ಗೆ ಇತ್ಯರ್ಥ ಮಾಡಲು ಸಭೆಗೆ ಹಾಜರಾಗಿ ಎಂದರೆ ಆ ಕಾರ್ಖಾನೆಯ ಅಧಿಕಾರಿಗಳು ೩, ೪ ಸಾವಿರ ರೂಪಾಯಿಗಳ ಸಂಬಳವನ್ನು ತೆಗೆದುಕೊಳ್ಳತಕ್ಕವರು ಇಲ್ಲಿಗೆ ಬಂದು ಅಶೋಕ ಹೋಟೆಲಿನಲ್ಲಿ ಇಳಿದುಕೊಂಡಿದ್ದರೂ ಸಭೆಗೆ ಹಾಜರಾಗುವುದಿಲ್ಲವೆಂದರೆ ಅರ್ಥವೇನು ? ಅಂಥಾ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಅವರು ಗೈರು ಹಾಜರಿಯಾಗುವುದರಲ್ಲಿ ದುರುದ್ದೇಶವಿದೆ. ಇದರ ಬಗ್ಗೆ ಅಧಿಕಾರಿಗಳು ತಮಗೆ ಸರಿಯಾದ ವಿವರಣೆಯನ್ನು ಕೊಟ್ಟಿಲ್ಲ. ಅದರ ಬಗ್ಗೆ ತಮಗೆ ನಾನು ತಿಳಿಸಬೇಕೆಂದರೆ ಆ ಕಾರ್ಖಾನೆಯಲ್ಲಿ ರಾ ಮೆಟೀರಿಯಲ್ಸ್ ಇರಲಿಲ್ಲ ಆಗ ಲೇ ಆಫ್ ಮಾಡಬೇಕಾಗಿತ್ತು, ಲೇ ಆಫ್ ಮಾಡಿದರೆ ಕೆಲಸಗಾರರಿಗೆ ಹೆಚ್ಚಿನ ವೇತನ ಕೊಡಬೇಕಲ್ಲ ಎನ್ನುವ ಕಾರಣಕ್ಕೋಸ್ಕರವಾಗಿ, ಈ ಒಂದು ದುರುದ್ದೇಶವನ್ನಿಟ್ಟುಕೊಂಡು ಅಲ್ಲಿ ಲಾಕೌಟ್ ಮಾಡಿದ್ದಾರೆ. ಆದುದರಿಂದ ಇದರ ಒಳಗುಟ್ಟನ್ನು ತಾವು ಪರಿಶೀಲನೆ ಮಾಡಿ ಆ ಬಡ ಕಾರ್ಮಿಕರಿಗೆ ನ್ಯಾಯವನ್ನು ಒದಗಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಪಂಪಾಪತಿ.—ಐಡಿಯಲ್ ಜಾವಾ ಕೈಗಾರಿಕೆ ಬಹಳ ದೊಡ್ಡ ಕೈಗಾರಿಕೆ. ಇದರಲ್ಲಿ ಎರಡೂವರೆ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ. ಅದು ಹೊಸ ಕೈಗಾರಿಕೆ ಏನಲ್ಲ, ಹಳೆಯ ಕೈಗಾರಿಕೆ ಆ ಕೈಗಾರಿಕೆಯಲ್ಲಿ ಮ್ಯಾನೇಜ್‌ಮೆಂಟ್‌ನವರೊಡನೆ ಅನೇಕ ಒಪ್ಪಂದಗಳನ್ನು ಮಾಡಿಕೊಂಡು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇತ್ತೀಚೆಗೆ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಗೆ ನೋಟೀಸ್ ಕೊಟ್ಟಿದ್ದಾರೆ. ಕಾರಣವೇನೆಂದರೆ, ಆಡಳಿತ ವರ್ಗ ೧೯೭೭ರಲ್ಲಿ ಮಾಡಿಕೊಂಡಿರತಕ್ಕ ಒಪ್ಪಂದವನ್ನು ಜಾರಿಗೆ ತರದಿರುವುದು, ಕ್ಯಾಂಟೀನ್‌ನಲ್ಲಿ ಕಡಿಮೆ ಬೆಲೆಯಲ್ಲಿ ಊಟ ಕೊಡಬೇಕೆಂದು ಮಾಡಿಕೊಂಡಿದ್ದಂತಹ ಒಪ್ಪಂದವನ್ನು ಜಾರಿಗೆ ತಂದಿಲ್ಲ. ಒಪ್ಪಂದವನ್ನು ಆಡಳಿತ ವರ್ಗ ಜಾರಿಗೆ ತರದಿದ್ದಾಗ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಅದನ್ನು ಒತ್ತಾಯ ಮಾಡುವುದು ಅವರ ಕರ್ತವ್ಯ. ಆದೂ ಕೂಡ ೧೯೭೭ರಲ್ಲಿ ಆಗಿದ್ದಂತಹ ಒಪ್ಪಂದ, ಅದಾದ ಮೇಲೆ ಹೊಸ ಬೇಡಿಕೆಗಳನ್ನು ಮಂಡಿಸಿ ಸುಮಾರು ೫-೬ತಿಂಗಳಾಯಿತು. ಆದರೂ ಸಹ ಇದುವರೆಗೆ ಆಡಳಿತ ವರ್ಗ ಆ ಕಡೆ ಗಮನ ಹರಿಸಿಲ್ಲ. ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಬೇಡಿಕೆಗಳ ಬಗ್ಗೆ ಒತ್ತಾಯ ಮಾಡುವುದನ್ನು ತಡೆಯುವುದಕ್ಕೋಸ್ಕರ ಅವರ ಮೇಲೆ ಇಲ್ಲದ ಸಲ್ಲದ ಆರೋಪಗಳು. ಎರಡೂವರೆ ಸಾವಿರ ಜನರ ಪ್ರತಿನಿಧಿಯಾಗಿ ೧೬ ವರ್ಷಗಳಿಂದ ಸಂಘಟನೆ ಮಾಡಿಕೊಂಡು ಬಂದಿರತಕ್ಕ ವ್ಯಕ್ತಿಗಳಿಗೆ ಆಡಳಿತ ವರ್ಗದವರ ಜೊತೆಯಲ್ಲಿ ನಡೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದರೆ ಇದರ ಬಗ್ಗೆ ಯೋಚನೆ ಮಾಡಬೇಕು. ಆಡಳಿತ ವರ್ಗ ಸಂಘಟನೆಯಲ್ಲಿ ಒಂದು ಬಿಕ್ಕಟ್ಟು ಉಂಟು ಮಾಡಿ ಉದ್ದೇಶ ಪೂರ್ವಕವಾಗಿ ಅವರಿಗೆ ಪ್ರಚೋದನೆ ಮಾಡಿ ಇವತ್ತು ಕಾನೂನಿಗೆ ವಿರುದ್ಧವಾಗಿ ಕೆಲಸಗಾರರನ್ನು ಹೊರಗಡೆ ಹಾಕಿದ್ದಾರೆ.

ಉಪಾಧ್ಯಕ್ಷರು.—ಆ ಬಗ್ಗೆ ಈಗ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಪಂಪಾಪತಿ.—ನಾನು ಕಾರ್ಮಿಕರ ಸಮಸ್ಯೆ ಬಗ್ಗೆ ಹೇಳಬೇಕಾಗಿದೆ.

ಉಪಾಧ್ಯಕ್ಷರು.—ಅದಕ್ಕೆ ಬೇರೆ ಅವಕಾಶ ಇದೆ, ಬೇಡಿಕೆ ಮೇಲೆ ಚರ್ಚೆ ಮಾಡುವಾಗ ಆ ವಿಚಾರಗಳನ್ನೆಲ್ಲ ಪ್ರಸ್ತಾಪಿಸಬಹುದು, ಈಗ ನಾನು ಚರ್ಚೆ ಮಾಡಲು ಅವಕಾಶ ನೀಡುವುದಕ್ಕೆ ಬರುವುದಿಲ್ಲ. ಆದ್ದರಿಂದ, ಕೇಳಬೇಕಾದುದನ್ನು ಕ್ಲಾರಿಫಿಕೇಷನ್ ರೂಪದಲ್ಲಿ ಕೇಳಿ.

ಶ್ರೀ ಪಂಪಾಪತಿ.—ಹೇಳಬೇಕಾದ ವಿಚಾರಗಳನ್ನು ಹೇಳಬೇಕಾಗುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ.— ಬೇಡಿಕೆ ಬಗ್ಗೆ ಚರ್ಚೆ ಮಾಡುವಾಗ ಒಂದೊಂದು ಕೈಗಾರಿಕೆಯ, ಒಂದೊಂದು ಕಾರ್ಖಾನೆಯ ವಿಚಾರವನ್ನು ಚರ್ಚೆ ಮಾಡುವುದಕ್ಕಾಗುವುದಿಲ್ಲ. ಏನಿದ್ದರೂ ಸರ್ಕಾರದ ಧೋರಣೆಯ ವಿಚಾರದಲ್ಲಿ ಚರ್ಚೆ ಮಾಡುತ್ತೇವೆ. ಇದು ಪ್ರತ್ಯೇಕ ಪ್ರಶ್ನೆಯಾದ್ದರಿಂದ ವಿಚಾರಗಳನ್ನು ಮಂತ್ರಿಗಳ ಗಮನಕ್ಕೆ ತರುವ ಸಲುವಾಗಿ ಹೇಳುತ್ತಿದ್ದಾರೆ. ಇದನ್ನು ಬೇಡಿಕೆ ಬಗ್ಗೆ ಚರ್ಚೆ ಮಾಡುವಾಗ ಮಾಡಿ ಎಂದರೆ ಹೇಗೆ ?

MR. DEPUTY SPEAKER.—Tell me whether there is any scope for a debate here. Is there any scope for a prolonged argument under this ?

ಶ್ರೀ ಪಂಪಾಪತಿ.—ನಮಗೆ ಬೇಕಾದ ಮಾಹಿತಿಗಳನ್ನು ಅವರಿಂದ ಪಡೆದುಕೊಳ್ಳಬೇಕಾಗುತ್ತದೆ ಮತ್ತು ನಮ್ಮಲ್ಲಿರುವ ಮಾಹಿತಿಗಳನ್ನು ಒದಗಿಸಬೇಕಾಗುತ್ತದೆ. ಇದು ಗಮನ ಸೆಳೆಯುವ ಸೂಚನೆ ರೂಪದಲ್ಲಿದೆ ಎಂಬುದನ್ನು ತಿಳಿದು ಕೊಂಡಿದ್ದೇನೆ.

MR. DEPUTY SPEAKER.—Rule 63 is very clear. There is no scope for a debate. ಕ್ಲಾರಿಫಿಕೇಷನ್ ರೂಪದಲ್ಲಿ ಕೇಳಲಿಕ್ಕೆ ಒಂದೆರಡು ಸಾರಿ ಅವಕಾಶ ಇದೆಯೇ ವಿನಹ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಪಂಪಾಪತಿ.—ಲಾಕೌಟ್ ಮಾಡಲು ಕಾರಣವೇನೆಂದರೆ, ಕಾರ್ಮಿಕ ಸಂಘದ ನಾಯಕರು ಏನು ಬೇಡಿಕೆಗಳನ್ನು ಮಂಡಿಸಿದ್ದಾರೆ ಅವನ್ನು ಮತ್ತು ಅವರು ಹಿಂದೆ ಏನು ಒಪ್ಪಂದ ಮಾಡಿಕೊಂಡಿದ್ದರು ಅದನ್ನು ಈಡೇರಿಸದೆ ಇರುವುದು, ಆದುದರಿಂದ, ಕಾನೂನು ಬಾಹಿರವಾಗಿ ಹೊರಗೀಲಿಯನ್ನೇನ್ನು ಹಾಕಿದ್ದಾರೆ ಅದನ್ನು ಕೂಡಲೇ ತೆಗೆದು, ಕಾರ್ಮಿಕರಿಗೆ ವೇತನ ಕೊಟ್ಟು ಕೆಲಸ ಪ್ರಾರಂಭ ಮಾಡಿಸಿ ಅವರ ಬೇಡಿಕೆಗಳನ್ನು ಇತ್ಯರ್ಥ ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ರಾಮಭಟ್.—ಳನೇ ಜೂನ್ ೧೯೮೨ರಲ್ಲಿ ಆ ಕೈಗಾರಿಕೆಯನ್ನು ಲಾಕೌಟ್ ಮಾಡಿದ್ದಾರೆ. ನಂತರ ೯ಕ್ಕೆ, ೧೭ಕ್ಕೆ, ೨೬ಕ್ಕೆ ಮತ್ತು ಜುಲೈ ೭ಕ್ಕೆ ಅವರನ್ನು ಕರೆದಿದ್ದಾರೆ. ಸರ್ಕಾರಕ್ಕೆ ಇದರಲ್ಲಿ ಏನೇನೂ ಆಸಕ್ತಿ ಇಲ್ಲವೆ ? ಅಲ್ಲಿ ಸುಮಾರು ೨-೩ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ. ಇದರಿಂದ ಆಗತಕ್ಕ ನಷ್ಟ ಎಷ್ಟು ? ಇಷ್ಟೊಂದು ಪ್ರಮುಖವಾದ ಉದ್ಯಮದಲ್ಲಿ ನಷ್ಟವಾಗುತ್ತಿದೆ ಎಂದರೆ ಇದರ ಬಗ್ಗೆ ಸರ್ಕಾರ ಎಷ್ಟು ಉದಾಸೀನ ತಾಳಿದೆ ಎಂಬುದು ವ್ಯಕ್ತವಾಗುತ್ತದೆ. ಈ ಉದಾಸೀನತೆಯ ಬಗ್ಗೆ ಸರ್ಕಾರ ಉತ್ತರ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಹೊರಗೀಲಿ ಹಾಕಿರುವ ಮತ್ತು ಕಾರ್ಮಿಕರ ಚಳುವಳಿಯ ಬಗ್ಗೆ ಸರ್ಕಾರಕ್ಕೆ ಮಾಹಿತಿಯಾಗಿದೆ ಎಂದು ತಿಳಿದುಕೊಂಡಿದ್ದೇನೆ, ಹಿಂದೆ ಏನೊಂದು ಒಪ್ಪಂದ ವಾಗಿದೆ ಅದನ್ನು ಜಾರಿಗೆ ಕೊಡತಕ್ಕದ್ದು ಮ್ಯಾನೇಜ್‌ಮೆಂಟಿನ ಕರ್ತವ್ಯ. ಕೊಡದಿದ್ದರೆ ಸರ್ಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಆದರೆ ಸರ್ಕಾರ ಕ್ರಮ ಕೈಗೊಂಡಿಲ್ಲ. ಆಗಿರತಕ್ಕ ಒಪ್ಪಂದ ವನ್ನು ಜಾರಿಗೆ ಕೊಡಿ ಅಂದಾಗ ಕಾರ್ಮಿಕ ನಾಯಕರ ಮೇಲೆ ಇಲ್ಲದ ಸಲ್ಲದ ಆಪಾದನೆಗಳನ್ನು ಮಾಡಿ ದ್ದಾರೆ, ಮತ್ತು ಹೊರಗೀಲಿ ಹಾಕಿದ್ದಾರೆ, ಸರ್ಕಾರಕ್ಕೆ ಈ ಬಗ್ಗೆ ಅಧಿಕಾರ ಇದೆ, ಆ ಅಧಿಕಾರವನ್ನು ಉಪಯೋಗಿಸಿ ಕೂಡಲೇ ಹೊರಗೀಲಿ ತೆಗೆಸಿ, ಕೈಗಾರಿಕೆ ಪ್ರಾರಂಭವಾಗುವಂತೆ ಮಾಡಿ, ಇದರಿಂದ ರಾಷ್ಟ್ರಕ್ಕೆ ಆಗುವ ನಷ್ಟವನ್ನು ತಪ್ಪಿಸಿಯಿರಿ, ಒಪ್ಪಂದ ಆದಂತಹ ವಿಚಾರದಲ್ಲಿ ನಿಮ್ಮ ಲೇಬರ್ ಆಫೀಸರ್‌ಗೆ ಸೂಚನೆ ಕೊಡಿ, ಮತ್ತು ಅದನ್ನು ಯಾವ ರೀತಿ ಜಾರಿಗೆ ಕೊಡಬೇಕೆಂಬುದರ ಬಗ್ಗೆ ಚರ್ಚೆ ಮಾಡಿ ಸಮಾಧಾನದಿಂದ ಕೂಡಲೇ ಜಾರಿಗೆ ಕೊಡತಕ್ಕ ವ್ಯವಸ್ಥೆ ಮಾಡಿ. ಕಾರ್ಮಿಕ ಸಂಘದ ನಾಯಕರು ಮತ್ತು ಮ್ಯಾನೇಜ್‌ಮೆಂಟಿನ ನಡುವೆ ಒಂದೊಂದು ಸಾರಿ ಮನಸ್ತಾಪ ಆದಾಗ ಇಲ್ಲದ ಸಲ್ಲದ ಆರೋಪ ಗಳು ಎರಡೂ ಕಡೆಯಿಂದು ಬರುವುದು ಸ್ವಾಭಾವಿಕ. ಕಾರ್ಮಿಕ ನಾಯಕರ ಮೇಲೆ ಏನು ಆರೋಪ ಮಾಡಿದ್ದಾರೆ ಅವನ್ನು ಅನಾವಶ್ಯಕವಾಗಿ ಮುಂದುವರಿಸಿಕೊಂಡು ಹೋದರೆ ವಾತಾವರಣ ಚನ್ನಾಗಿರುವು ದಿಲ್ಲ. ಆದುದರಿಂದ ಅದನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಪುನಃ ಅವರ

ಮೇಲೆ ಹರಾಸ್‌ಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದಾಗಬಾರದು. ೨-೩ ದಿವಸದಲ್ಲಿ ಹೊರಗೀಲಿಯನ್ನು ತೆಗೆಸಿ ಕೈಗಾರಿಕೆ ಪ್ರಾರಂಭವಾಗುವಂತೆ ಮಾಡಿ, ಮತ್ತು ಒಪ್ಪಂದದ ಬಗ್ಗೆ ಕೂಡಲೇ ವಿಚಾರಣೆ ನಡೆಸಿ. ಸೇಡು ತೀರಿಸಿಕೊಳ್ಳುವ ಮನೋಭಾವನೆಯನ್ನು ಮ್ಯಾನೇಜ್‌ಮೆಂಟಿನವರೂ ಇಟ್ಟುಕೊಳ್ಳಕೂಡದು ಮತ್ತು ಕಾರ್ಮಿಕರೂ ಕೂಡ ಸರಿಯಾಗಿ ನಡೆದುಕೊಳ್ಳಬೇಕು. ಈ ರೀತಿ ವ್ಯವಸ್ಥೆ ಮಾಡಿದರೆ ವಿವಾದ ನಿಲ್ಲುತ್ತದೆ, ರಾಷ್ಟ್ರಕ್ಕೆ ಆಗುತ್ತಿರುವ ನಷ್ಟ ತಪ್ಪುತ್ತದೆ. ಈ ಬಗ್ಗೆ ಒಂದು ಉಚಿತವಾದ ಭರವಸೆಯನ್ನು ಮಂತ್ರಿಗಳು ಸದನಕ್ಕೆ ಕೊಡಬೇಕು.

ಶ್ರೀ ಬಿ. ವಿ ಕಕ್ಕಿಲಾಯ.—ಬೊಮ್ಮಾಯಿಯವರು ವಿಷಯಗಳನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಹಿಂದೆ ಏನೊಂದು ಒಪ್ಪಂದ ಆಗಿತ್ತು ಆದರ ವಾಯಿದೆ ಮುಗಿಯಿತು ಆ ಒಪ್ಪಂದದ ಪ್ರಕಾರ ಕ್ಯಾಂಟೀನ್‌ನಲ್ಲಿ ಊಟಾತಿಂಡಿ ಕೊಡಬೇಕು. ಆ ಪ್ರಕಾರ ೨-೩ ವರ್ಷಗಳಿಂದ ಮಾಡುತ್ತಿಲ್ಲ ಆ ಒಪ್ಪಂದವನ್ನು ಮ್ಯಾನೇಜ್‌ಮೆಂಟಿನವರು ಜಾರಿಗೆ ಕೊಡದೆ ಇರುವುದರಿಂದ ಈ ವಿವಾದ ಬರುವುದಕ್ಕೆ ಕಾರಣವಾಯಿತು. ಕ್ಯಾಂಟೀನ್‌ನಲ್ಲಿ ಹಳೇ ಒಪ್ಪಂದದ ಪ್ರಕಾರ ಏನೇನು ಸವಲತ್ತುಗಳನ್ನು ಕೊಡುತ್ತಿದ್ದರು ಅದನ್ನು ಹೊಸ ಒಪ್ಪಂದದ ಪ್ರಕಾರ ಕೊಟ್ಟಿಲ್ಲ ಅದನ್ನು ಜಾರಿಗೆ ಕೊಡಿ ಎಂದು ಕೇಳುತ್ತಿದ್ದಾರಲ್ಲದೆ ಹೊಸದೊಂದು ವಿವಾದವನ್ನು ಮ್ಯಾನೇಜ್‌ಮೆಂಟಿನ ಗಮನಕ್ಕೆ ತಂದಿದ್ದಾರೆ. ಇದಕ್ಕೆ ಅಧ್ಯಕ್ಷರು ಮಂತ್ರಿ ಕಾರ್ಯದರ್ಶಿಯವರನ್ನು ಅನುಚಿತವಾಗಿ ವರ್ತಿಸಿದರು ಎಂದು ಶೋಕಾಸ್ ನೋಟೀಸ್ ಕೊಟ್ಟರುವುದರಿಂದ ಪರಿಣಾಮ ಈ ರೀತಿಯಾಗಿದೆ. ನೋಟೀಸ್ ಕೊಟ್ಟಿದ್ದನ್ನು ವಾಪಸ್ಸು ತೆಗೆದು ಕೊಂಡು ಹಳೇ ಒಪ್ಪಂದವನ್ನು ಜಾರಿಗೆ ತಂದು ಕ್ಯಾಂಟೀನ್ ಅನ್ನು ನಡೆಸಲಿ. ಕ್ಯಾಂಟೀನ್‌ನಲ್ಲಿ ಕಾರ್ಮಿಕರಿಗೆ ಕೊಡಬೇಕಾದ ಸವಲತ್ತುಗಳನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಲಿ. ತಾವು ಮಧ್ಯೆ ಪ್ರವೇಶ ಮಾಡಿ ಹೊರಗೀಲಿಯನ್ನು ತೆಗೆಸಿ ಒಳ್ಳೆಯ ವಾತಾವರಣ ನಿರ್ಮಾಣವಾಗುವಂತೆ ಮಾಡಿ ಎಲ್ಲ ಕೆಲಸಗಾರರು ಆಲ್ಲಿ ಹೋಗಿ ಯಾವ ತೊಂದರೆಯೂ ಇಲ್ಲದಂತೆ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಒಟ್ಟಿನಲ್ಲಿ, ಈ ಬಗ್ಗೆ ಜರೂರಾಗಿ ಕ್ರಮ ತೆಗೆದುಕೊಳ್ಳಬೇಕೆಂದೂ, ಇವನ್ನು ಹಾಗೇ ಮುಂದುವರಿಸಿಕೊಂಡು ಹೋಗುವುದಕ್ಕೆ ಅವಕಾಶ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ. ಇದನ್ನು ಹೀಗೆಯೇ ಸುಮ್ಮನೆ ಮುಂದುವರಿಸಿಕೊಂಡುಹೋಗುವುದಕ್ಕೆ ಅವಕಾಶ ಕೊಡಬಾರದು. ಒಪ್ಪಂದಕ್ಕೆ ಬರದಿದ್ದರೆ ಏನಾದರೂ ಪ್ರಯತ್ನ ಮಾಡಿ ಸಮಸ್ಯೆಯನ್ನು ಬಿಡಿಸುವ ವ್ಯವಸ್ಥೆ ಮಾಡಿ. ಕನ್‌ಸಿಲಿಯೇಷನ್ ಆಫೀಸರ್ ಕರೆಸಿದಾಗ ಬರದೇ ಇರಬಹುದು. ಆದರೆ ಲಾಕೌಟನ್ನು ಕಾನೂನುಬಾಹಿರ ಎಂದು ಸಾರಿ ಲಾಕೌಟ್ ಆದ ಸಮಯದ ಸಂಬಳವನ್ನು ಕೂಡ ಕಾರ್ಮಿಕರಿಗೆ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಕೆ. ಬಿ. ಶಿವಯ್ಯ.—ಕಾರ್ಮಿಕರನ್ನು, ಆಡಳಿತವರ್ಗದವರನ್ನು ಎರಡು ಮೂರು ಸಾರಿ ಕರೆಸಿ ಅಧಿಕಾರಿಗಳು ಒಂದು ತೀರ್ಮಾನವನ್ನು ತೆಗೆದುಕೊಂಡು ಲಾಕೌಟ್ ಲಿಫ್ಟ್ ಮಾಡುವ ಬಗ್ಗೆ ಪ್ರಯತ್ನಪಟ್ಟರೂ ಆ ಕಾರ್ಯ ವಿಫಲವಾಗಿದೆ ಎಂಬ ಅಂಶ ಮಾನ್ಯ ಮಂತ್ರಿಗಳ ಹೇಳಿಕೆಯಿಂದ ಗೊತ್ತಾಗುತ್ತದೆ. ಅಲ್ಲಿಂದ ವರದಿ ತರಿಸಿಕೊಂಡು ನೀವು ಲಾಕೌಟ್ ಮಾಡಿರುವುದು ಸರಿಯಾದುದಲ್ಲ, ಅದನ್ನು ತೆಗೆಯಬೇಕು ಎಂದು ಆದೇಶ ಕೊಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. ಕಾರ್ಮಿಕರ ಹಿತದೃಷ್ಟಿಯಿಂದ ಆ ಅಧಿಕಾರವನ್ನು ಸರ್ಕಾರಿ ಮಟ್ಟದಲ್ಲಿ ಚಲಾಯಿಸಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಎ. ಬಿ. ಜಕನೂರ್.—ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ್ದನ್ನೆಲ್ಲಾ ನಾನು ಕೂಲಂಕುಷವಾಗಿ ಕೇಳಿದ್ದೇನೆ. ಮಾನ್ಯ ಗಂಗಾಧರನ್ ಅವರು ಲಾಕೌಟ್ ಮಾಡಿರುವುದು ಕಾನೂನು ಬಾಹಿರವಾಗಿದ್ದರೂ ಸರ್ಕಾರ ಏತಕ್ಕೆ ಸುಮ್ಮನೆ ಕುಳಿತಿದೆ ಎಂದು ಹೇಳಿದ್ದಾರೆ. ಸರ್ಕಾರದ ಮೇಲೆ ಆರೋಪ ಮಾಡುವ ಶೈಲಿಯಲ್ಲಿ ಅವರು ಮಾತನಾಡಿದರು. ನಾನು ಈ ಕೇಸನ್ನು ಕೂಲಂಕುಷವಾಗಿ ಅಧ್ಯಯನ ಮಾಡಿದ್ದೇನೆ. ವಸ್ತುಸ್ಥಿತಿಯನ್ನು ತಿಳಿದುಕೊಂಡಿದ್ದೇನೆ. ಇದು ಬಹಳ ಕ್ಷುಲ್ಲಕವಾದ ಕಾರಣಕ್ಕೆ ಲಾಕೌಟ್ ಆಗಿದೆ. ಯಾರಾದರೂ ಟ್ರೇಡ್ ಯೂನಿಯನ್ ಅಧಿಕಾರವರ್ಗದವರನ್ನು, ಕಾರ್ಯದರ್ಶಿ ಅಥವಾ ಅಧ್ಯಕ್ಷರನ್ನು ಅಥವಾ ಇನ್ನಿತರೆ ಕಾರ್ಮಿಕ ನಾಯಕರನ್ನು ಕೆಲಸದಿಂದ ತೆಗೆದು ಹಾಕಿದರೆ ಕಾರ್ಮಿಕರು ಆ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳುವುದು. ಗೋ-ಸ್ಲೋ ಮಾಡುವುದು ಇದೆಲ್ಲಾ ಸಾಮಾನ್ಯವಾಗಿ ನಡೆಯುತ್ತಾ ಇರುತ್ತದೆ. ಆದರೆ ಈ ಪ್ರಕರಣದಲ್ಲಿ ಬಹಳ ಕ್ಷುಲ್ಲಕ ಕಾರಣಕ್ಕಾಗಿ ಲಾಕೌಟ್ ಆಗಿದೆ, ಗಲಾಟೆ ಆಗಿದೆ. ಷೋಕಾಸ್ ನೋಟೀಸ್ ನೀಡಿರುವುದಕ್ಕಾಗಿ ಆ ರೀತಿ

ಮಾಡುತ್ತಿದ್ದಾರೆ. ಅಲ್ಲೀನೂ ಹೊಡೆದಾಟ, ಗಲಾಟೆ, ಏನೂ ಆಗಿಲ್ಲ. ಸ್ವಲ್ಪ ಬಾಯಿಗೆ ಬಾಯಿ ಮಾತಾಗಿದೆ. ಅದಕ್ಕೋಸ್ಕರ ಎಕ್ಸ್‌ಪ್ಲನೇಷನ್ ಕಾಲ್‌ಫರ್ ಮಾಡಿದ್ದಾರೆ. ಇಂಥ ಕೆಲಸ ಎಲ್ಲಾ ಕಡೆ ಮಾಡುತ್ತಾರೆ. ಹೆಚ್ಚು ಮಾತನಾಡಿದಾಗ 'ಸಾರಿ' ಎಂದಕೂಡಲೇ ಪ್ರಕರಣ ಅಲ್ಲಿಗೆ ಮುಗಿಯುತ್ತದೆ. ಇಲ್ಲಿ ಏಕೋ ಏನೋ ನೋಟೀಸ್ ಕೊಟ್ಟಕೂಡಲೇ ಟೂಲ್‌ಡೌನ್ ಸ್ಟ್ರೈಕ್ ಶುರು ಮಾಡಿದರು. ಇವರು ಇದನ್ನು ಪ್ರಾರಂಭ ಮಾಡಿದತಕ್ಷಣ ಆಡಳಿತವರ್ಗದವರು ಅಂಜಿಯೋ ಅಥವಾ ದುರುದ್ದೇಶದಿಂದಲೋ ಏನೋ ಲಾಕೌಟ್ ಮಾಡಿದ್ದಾರೆ. ಅವರು ತಕ್ಷಣ ಮಾಡಬಾರದಾಗಿತ್ತು. ನೈಟ್ ಷಿಫ್ಟ್‌ನಿಂದ ಲಾಕೌಟ್ ಡಿಕ್ಲೇರ್ ಮಾಡಿದ್ದಾರೆ. ಆ ವಿಷಯ ಗೊತ್ತಾದತಕ್ಷಣ ಅಧಿಕಾರಿಗಳಿಗೆ ಆದೇಶಕೊಟ್ಟು ಲಾಕೌಟ್ ತೆಗೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ಲೇಬರ್ ಕಮಿಷನರ್‌ರವರು, ಅಸಿಸ್ಟೆಂಟ್ ಲೇಬರ್ ಕಮಿಷನರ್‌ರವರು ಎಲ್ಲರೂ ಪ್ರಯತ್ನ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಮಾಲೀಕರು ಬರಲೇ ಇಲ್ಲ ಅವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು ಎಂದು ಕೇಳಿದರು. ತಮಗೆಲ್ಲರಿಗೂ ಗೊತ್ತಿದೆ, ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್‌ನಲ್ಲಿ ಯಾರಾದರೂ ಬಂದು ಕರೆದಾಗ ಹಾಜರಾಗದಿದ್ದರೆ ಕ್ರಮ ಗೆತೆದುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಈ ಆಕ್ಟಿಗೆ ತಿದ್ದುಪಡಿ ತರಬೇಕಾಗಿದೆ. ಕೇಂದ್ರ ಸರ್ಕಾರ ಈ ಬಗ್ಗೆ ತಿದ್ದುಪಡಿ ತರುತ್ತಿದೆ. ಅದನ್ನು ಪರ್ಸ್ಯೂಡ್ ಮಾಡಿ ಕನ್‌ಸಿಲಿಯೇಷನ್, ಪರ್ಸ್ಯೂಷನ್ ಮುಗಿದನಂತರ ಆ ಬಗ್ಗೆ ಕಾಯಿದೆ ಮಾಡತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ. ಸರ್ಕಾರಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದು ಗೊತ್ತಿದೆ. ಲಾಕೌಟ್ ಪ್ರೊಹಿಬಿಟ್ ಮಾಡಬೇಕಾದರೆ we have to refer it for adjudication. unless the matter is referred for adjudication, the Government cannot prohibit the lock out or strike. Here, what is the dispute ? There is no dispute at all. ಮಾನ್ಯ ಸದಸ್ಯರು ಹಿಂದಿನ ಸೆಟ್ಲ್‌ಮೆಂಟ್ ಇತ್ತು, ಅದನ್ನು ಇಂಪ್ಲಿಮೆಂಟ್ ಮಾಡಲಿಲ್ಲ, ಆ ಬಗ್ಗೆ ಕೇಳಿದ್ದಕ್ಕೆ ವಾಗ್ವಾದವಾಗಿ ಹೀಗಾಗಿದೆ ಎಂದು ಹೇಳಿದರು. ಅದು ಸರಿಯಾದುದಲ್ಲ. ಆ ಪ್ರಶ್ನೆ ಅಲ್ಲಿಲ್ಲ. ಹೊಸದಾಗಿ ಕೆಲವೊಂದು ಬೇಡಿಕೆಗಳನ್ನು ಇಟ್ಟಿದ್ದಾರೆ ಎಂದು ಹೇಳುತ್ತಾರೆ. ಅದು ನಮ್ಮ ಗಮನಕ್ಕೆ ಬಂದಿಲ್ಲ.

ಪಂಪಾವತಿ.—ನಿಮಗೆ ಸರಿಯಾಗಿ ವಾಹಿತಿ ಸಿಕ್ಕಿಲ್ಲ ಅಂತ ಕಾಣುತ್ತೆ.

ಶ್ರೀ ಎ. ಬಿ. ಜಕನೂರು.—ಏನೇ ತಾರೀಖು ಅವರನ್ನು ಕರೆಸುತ್ತಿದ್ದೇವೆ. ಆಗ ನಿಮ್ಮನ್ನೂ ಕರೆಸುತ್ತೇನೆ. ಹಾಗೇನಾದರೂ ಇದ್ದರೆ ಕ್ರಮ ತೆಗೆದುಕೊಳ್ಳೋಣ. ಅಲ್ಲಿ ಲಾಕೌಟ್...

ಶ್ರೀ ಎಸ್. ಆರ್. ಬೊಮ್ಮಾಯಿ.—ಏನೇ ತಾರೀಖು ಕರೆಸುತ್ತೀರಾ ?

ಶ್ರೀ ಎ. ಬಿ. ಜಕನೂರ್.—ಹೌದು. ಸರ್ಕಾರ ಸಾಧ್ಯವಾದಷ್ಟು ಬೇಗ ಕ್ರಮತೆಗೆದುಕೊಳ್ಳುತ್ತದೆ ಲಾಕೌಟ್‌ನಿಂದ ಕಾರ್ಮಿಕರಿಗೆ ತೊಂದರೆಯಾಗುತ್ತಿದೆ, ಕಾರ್ಮಿಕನಾಯಕರೇನೋ ಮಾಡಬಹುದು, ಆದರೆ ಕಾರ್ಮಿಕರ ಗತಿ ಏನು, ತಿಂಗಳಾಯಿತು ಎಂದು ಮಾನ್ಯ ಬೊಮ್ಮಾಯಿಯವರು ಹೇಳಿದರು. ಇದರ ಜೊತೆಗೆ ನ್ಯಾಷನಲ್ ಪ್ರೊಡಕ್ಷನ್ ಹೋಗುತ್ತಿದೆ. ಸರ್ಕಾರಕ್ಕೆ ಬರುವಂತಹ ರೆವಿನ್ಯೂ ಹೋಗುತ್ತಿದೆ ಎಂದೂ ಹೇಳಿದರು. ಇದೆಲ್ಲಾ ಅಕ್ಷರಶಃ ನಿಜ. ಆದರೆ ಸರ್ಕಾರ ಸುಮ್ಮನೆ ಕುಳಿತಿದೆ ಎಂಬ ಅಭಿಪ್ರಾಯ ಮಾನ್ಯ ಸದಸ್ಯರಲ್ಲಿದೆ. ಹಾಗೇನೂ ಇಲ್ಲ. ವಿರೋಧಪಕ್ಷದವರಿಗೆ ಏನಾದರೂ ಆರೋಪ ಮಾಡಬೇಕು ಎಂಬ ಉದ್ದೇಶ ಇದ್ದು ಆರೋಪ ಮಾಡುವುದಾದರೆ ನನ್ನ ಆಕ್ಷೇಪಣೆ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಆರೋಪಣೆ ಮಾಡೇ ಇಲ್ಲ.

ಶ್ರೀ ಎ. ಬಿ. ಜಕನೂರ್.—ಮಾನ್ಯ ಗಂಗಾಧರನ್ ಅವರು ಸರ್ಕಾರದ ಮೇಲೆ ಅವರು ಒತ್ತಡ ತಂದಿರಬೇಕು ಎಂದು ಹೇಳಿದರು. ನಾವು ಎರಡೂವರೆ ಸಾವಿರ ಜನರನ್ನು ನೋಡಬೇಕೋ, ಒಬ್ಬ ಮಾಲೀಕನನ್ನು ನೋಡಬೇಕೋ ? ಹಾಗೇನೂ ಇಲ್ಲ.

ಶ್ರೀ ಹೆಚ್. ಗಂಗಾಧರನ್.—ಈ ಲಾಕೌಟ್‌ಗೆ ಬೇರೆ ಕಾರಣಗಳಿವೆ ಎಂದು ಹೇಳಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾರ್ಮಿಕರು ಮತ್ತು ಮಾಲೀಕರ ನಡುವೆ ಈ ರೀತಿ ಗಲಾಟೆ ಎಂದೂ ಆಗಿರಲಿಲ್ಲ. ಏನೋ ವಿಷವೇಳೆ ಆಗಿದೆ. ಅದೊಂದು ಒಳ್ಳೆಯ ಕಾರ್ಖಾನೆ.

ಶ್ರೀ ಎ. ಬಿ. ಜಕನೂರ್.—ಮಾನ್ಯ ಬೊಮ್ಮಾಯಿಯವರು ಹೇಳಿದ ಹಾಗೆ ಈರೀತಿ ಎಂದೂ ಆಗಿಲ್ಲ. ಏನೋ ಒಂದು ಕ್ಷುಲ್ಲಕ ಕಾರಣಕ್ಕಾಗಿ ಆಗಿದೆ. ಮೊನ್ನೆ ಚುನಾವಣೆ ನಡೆದಾಗ ಟ್ರೇಡ್

ಯೂನಿಯನ್‌ನಲ್ಲಿ ಬೇರೆ ಪಕ್ಷದವರು ಬಂದಿದ್ದಾರೆ. ಅದೂ ಸ್ವಲ್ಪ ಗಮನಿಸಬೇಕಾದ ಅಂಶ. ಸರ್ಕಾರ ಏತಕ್ಕೆ ಸುಮ್ಮನೆ ಕುಳಿತಿದೆ ಎಂದರೆ ಇಂಥ ಸಮಸ್ಯೆಗಳು ಬಂದಾಗ ಸ್ವಲ್ಪ ಸೂಕ್ಷ್ಮವಾಗಿ ವ್ಯವಹರಿಸ ಬೇಕಾಗುತ್ತದೆ. ಹಾಗೆ ಮಾಡದೆ ಲಾಕೌಟ್ ಪ್ರೊಹಿಬಿಟ್ ಮಾಡಿದ ಕೂಡಲೇ somebody else who is aggrieved, he goes to the High Court, files a writ and obtains a stay. ನಾವು ಮಾಡಿದ್ದು ವ್ಯರ್ಥವಾಗುತ್ತದೆ. ಹಿಂದೆ ಲಾಕೌಟ್ ಪ್ರೊಹಿಬಿಟ್ ಮಾಡಿದಾಗ ಅವರು ಹೈಕೋರ್ಟಿಗೆ ಹೋಗಿರುವ ವಿಚಾರ ತಮಗೆ ಗೊತ್ತೇ ಇದೆ, ಕಾರ್ಮಿಕ ಕಮಿಷನರ್ ಅವರಿಗೆ ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಹೇಳಿದ್ದೇನೆ. ಆಡಳಿತ ವರ್ಗದವರನ್ನು, ಕಾರ್ಮಿಕರನ್ನು ಕರೆಸು ತ್ತಿದ್ದೇವೆ. ಜೊತೆಗೆ ಕಾರ್ಮಿಕ ನಾಯಕರಾದ ಎಂ. ಎಸ್. ಕೃಷ್ಣನ್ ಮುಂತಾದವರಿಗೆ ಕೂಡ ಬರಲಿಕ್ಕೆ ಹೇಳಿದ್ದೇನೆ.

ಶ್ರೀ ಹೆಚ್. ಗಂಗಾಧರಪ್ಪ.—ನಮ್ಮನ್ನೂ ಕರೆಯಿರಿ.

ಶ್ರೀ ಎ. ಬಿ. ಜಕನೂರ್.—ಎಲ್ಲರನ್ನೂ ಕರೆಯುತ್ತೇನೆ.

FINANCIAL BUSINESS

Discussion on Demands for grants for 1982-83—Demand Nos. 23&27

MR. DEPUTY SPEAKER.—Now, further discussion and voting on the demands. Now, Prabhakar Telkar will initiate the discussion :

SRI PRABHAKAR TELKAR.—While supporting the demand numbers 23 and 27, I submit that nationalisation of roads in Karnataka.....

ಶ್ರೀ ಎಸ್. ಎಸ್. ಆರಕೇರಿ.—ನಾನು ಭಾಷಣ ಮಾಡುವಾಗ ಕನ್ನಡದಲ್ಲಿ ಮಾತನಾಡಿ ಎಂದು ಹೇಳುತ್ತಾರೆ. ಆದರೆ ಅವರು.....

ಶ್ರೀಮತಿ ಎಸ್. ಪ್ರಮಿಳಾ.—ಮಾನ್ಯ ಸದಸ್ಯರಾದ ಪ್ರಭಾಕರ ತೇಲ್ಕರ್ ಅವರಿಗೆ ಕನ್ನಡದಲ್ಲಿ ಮಾತನಾಡುವುದಕ್ಕೆ ಬರುತ್ತದೆ. ಇನ್ನು ಮೇಲೆ ಅವರು ಕನ್ನಡದಲ್ಲಿ ಮಾತನಾಡದಿದ್ದರೆ ನಾವೆಲ್ಲರೂ ಹೊರಗೆ ಹೋಗುತ್ತೇವೆ.

ಶ್ರೀ ಪಂಪಾಪತಿ.—ನಾವೂ ಹೊರಗೆ ಹೋಗುತ್ತೇವೆ.

ಉಪಾಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಒಟ್ಟಿಗೆ ಮಾತನಾಡಬೇಡಿ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ನಾವೂ ಹೊರಗೆ ಹೋಗುತ್ತೇವೆ.

ಉಪಾಧ್ಯಕ್ಷರು.—ತೇಲ್ಕರ್ ಅವರು ಮಾತನಾಡಲಿ.

ಪಂಪಾಪತಿ.—ಎಲ್ಲರೂ ಕನ್ನಡದಲ್ಲಿ ಮಾತನಾಡಬೇಕು.

ಶ್ರೀ ಎಸ್. ಎಸ್. ಆರಕೇರಿ.—ಉಪಾಧ್ಯಕ್ಷರೇ, ತಾವೂ ಇನ್ನು ಮೇಲೆ ಕನ್ನಡದಲ್ಲಿ ಮಾತನಾಡಿ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಪ್ರಭಾಕರ ತೇಲ್ಕರ್ ಅವರು ಕನ್ನಡದಲ್ಲೇ ಮಾತನಾಡುತ್ತೇನೆ ಎಂದು ಹೇಳಿದ್ದರು. ಆದರೆ ನಿಂತುಕೊಂಡ ತಕ್ಷಣ ಇಂಗ್ಲೀಷಿನಲ್ಲೇ ಪ್ರಾರಂಭ ಮಾಡಿದ್ದಾರೆ.

ಉಪಾಧ್ಯಕ್ಷರು.—ಇಂಗ್ಲೀಷಿನಲ್ಲಿ ಪುರು ಮಾಡಿದ್ದಾರೆ. ಇಂಗ್ಲೀಷಿನಲ್ಲೇ ಮುಂದುವರೆಸಲಿ.

ಶ್ರೀ ಪಂಪಾಪತಿ.—ಮಾನ್ಯ ಉಪಾಧ್ಯಕ್ಷರೆ, ನೀವೂ ಹೀಗೇ ಮಾಡುತ್ತೀರಲ್ಲ.

ಉಪಾಧ್ಯಕ್ಷರು.—ಮುಂದೆ ಮಾತನಾಡುವವರು ಕನ್ನಡದಲ್ಲಿ ಮಾತನಾಡಲಿ. ಈಗ ಮಾನ್ಯ ಸದಸ್ಯರು ಇಂಗ್ಲೀಷಿನಲ್ಲಿ ಪ್ರಾರಂಭ ಮಾಡಿದ್ದಾರೆ.

ಶ್ರೀ ಪಂಪಾಪತಿ.—ಕನ್ನಡ ಮಾತನಾಡುತ್ತಿದ್ದರೆ ಕನ್ನಡ ಬರುತ್ತದೆ.

MR. DEPUTY SPEAKER.—I cannot force Sri Telkar to speak in Kannada. ಕಾನೂನು ಪ್ರಕಾರ ನಾನು ಒತ್ತಾಯ ಮಾಡುವುದಕ್ಕಾಗುವುದಿಲ್ಲ. ನಾನೇನು ಮಾಡಲಿ ?